**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು :- ಶ್ರೀ ಎಲ್ ಎಂ ವಕೀಲರಿಂದ ವಾದಿ ಪರವಾಗಿ .**

4. ನಾನು 8 ನೇ ತರಗತಿ ವಿದ್ಯಾಭ್ಯಾಸ ಮಾಡಿರುತ್ತೇನೆ. ಕನ್ನಡ ಓದಲು ಬರೆಯಲು ಬರುತತದೆ. ಇಂಗ್ಲೀಷ್ ಅರ್ಥವಾಗುತ್ತದೆ. ವಾದಿಗಳು ಹಾಕಿರುವ ದಾವೆಯ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದ ಪತ್ರಕ್ಕೆ ಮಾಹಿತಿಯನ್ನು ವಾದಿ ನೀಡಿರುತ್ತಾರೆ. ಪ್ರಮಾಣ ಪತ್ರದಲ್ಲಿ ಹೇಳಿರುವ ಮಾಹಿತಿಯನ್ನು ನಮ್ಮ ವಕೀಲರು ನೀಡಿರುತ್ತಾರೆ. ನನಗೆ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಷಯ ಖುದ್ದು ಮಾಹಿತಿ ಇಲ್ಲ ಎಂದರೆ ಸರಿ.

5. ನಮ್ಮ ಕುಟುಂಬದ ಮೂಲ ಪುರಷ ಗಾರೆಮನೆ ದ್ಯಾಮಣ್ಣ ಎಂದರೆ ಸರಿ. ಅವರ ಮೊದಲನೇ ಹೆಂಡತಿ ಹೆಸರು ತಿಪ್ಪಕ್ಕ ಎಂದರೆ ಸರಿಯಲ್ಲ. ತಿಪ್ಪಕ್ಕ ಅವರ 2 ನೇ ಹೆಂಡತಿ ಇರುತ್ತಾರೆ. ಮೊದಲನೇ ಹೆಂಡತಿಯ ಹೆಸರು ಮಾಹಿತಿ ಇರುವುದಿಲ್ಲ. ಗಾರೆಮಣೆ ದ್ಯಾಮಣ್ಣ ನನ್ನ ತಾತ ಎಂದರೆ ಸರಿ ಅವರ ಬಗ್ಗೆ ನನಗೆ ಎಲ್ಲಾ ಮಾಹಿತಿ ಇರುತ್ತದೆ. ಅವರ ಮೊದಲನೇ ಹೆಂಡತಿ ಹೆಸರು ತಿಪ್ಪಕ್ಕ ಹಾಗೂ 2 ನೇ ಹೆಂಡತಿ ಹೆಸರು ಗುಂಡಮ್ಮ ಎಂದರೆ ಸರಿಯಲ್ಲ. ತಿಪ್ಪಕ್ಕ ಳನ್ನು ಗುಂಡಮ್ಮ ಎಂದು ಕೂಡ ಕರೆಯುತ್ತಿದ್ದರು ಎಂದು ತೋರಿಸಲು ಯಾವುದೇ ದಾಖಲಾತಿ ಇಲ್ಲ. ನನ್ನ ಪ್ರಮಾಣ ಪತ್ರದಲ್ಲಿ ತಿಪ್ಪಕ್ಕಳನ್ನು ಗುಂಡಮ್ಮ ಎಂದು ಕರೆಯುತ್ತಿದ್ದರು ಎಂದು ಬರೆಸಿರುವುದಿಲ್ಲ. ಜಿ. ಭೀಮಣ್ಣ ಹಾಗೂ ಮಾಹಾಂತಣ್ಣ ತಿಪ್ಪಕ್ಕ ನ ಮಕ್ಕಳು. ಅವರಿಗೆ ಇಬ್ಬರು ಗಂಡು ಮಕ್ಕಳು ಹೊರೆತು ಪಡಿಸಿ ಬೇರೆ ಮಕ್ಕಳು ಇರುವುದಿಲ್ಲ. ತಿಪ್ಪಕ್ಕಳಿಗೆ ಒಬ್ಬಳೇ ಮಗಳು ಮೂಕಮ್ಮ ಎಂದರೆ ಸರಿಯಲ್ಲ.

6. ತಿರುವಣ್ಣ ರುದ್ರಮ್ಮ ನ ಮಗ ಇರುತ್ತಾನೆ. ತಿರುವಣ್ಣ ಹಾಗೂ ರುದ್ರಮ್ಮ ನಮ್ಮ ವಂಶಕ್ಕೆ ಸೇರಿರುವುದಿಲ್ಲ. ಮೂಕಮ್ಮ ದ್ಯಾಮ್ಮಣ್ಣನ ಮೊದಲನೇ ಹೆಂಡತಿಯ ಮೂರನೇ ಮಗಳು ಇರುತ್ತಾಳೆ. ನನ್ನ ತಂದೆಯ ತಂದೆ ಅಂದರೆ ನನ್ನ ತಾತನ ಹೆಸರು ದ್ಯಾಮಣ್ಣ ಇರುತ್ತದೆ. ಮೂಕಮ್ಮ ಯಾನೇ ನಾಗಮ್ಮನ ದಾಖಲಾತಿಗಳನ್ನು ಹಾಜರು ಪಡಿಸಿರುತ್ತೇನೆ. ಮೂಕಮ್ಮನ ತಾಯಿಯ ಹೆಸರು ಗೊತ್ತಿರುವುದಿಲ್ಲ. ಮೂಕಮ್ಮ ಯಾನೇ ನಾಗಮ್ಮ ನನಗೆ ಸಂಬಂಧದಲ್ಲಿ ಅತ್ತೆಯಾಗುತ್ತಾರೆ. ಮೂಕಮ್ಮ ದ್ಯಾಮಣ್ಣ ನ ಮಗಳು ಇರುವ ಬಗ್ಗೆ ನಾನು ಯಾವುದೇ ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ. ಮೂಕಮ್ಮ ದ್ಯಾಮಣ್ಣನ ಮಗಳು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಗಾರೆಮಣೆ ಬಿ,ೀಮಣ್ಣ ಹಾಗೂ ಗಾರೆಮನೆ ಮಹಾಂತಣ್ಣ ದಾಮಣ್ಣನ 2 ನೇ ಹೆಂಡತಿಯ ಮಕ್ಕಳು ಆದ್ದುರಿಂದ ಅವರಿಬ್ಬರು

ಮೂಕಮ್ಮನ ಅಣ್ಣಂದಿರು ಇರುತ್ತಾರೆ.  ಮೂಕಮ್ಮ ಗಾರೆಮನೆ ಭೀಮಣ್ಣ ಹಾಗೂ ಗಾರೆಮನೆ ಮಹಾಂತಣ್ಣ ಒಂದೇ ತಾಯಿಯ ಮಕ್ಕಳು ಇರುವುದಿಲ್ಲ ಎಂದರೆ ಸರಿ.  ಮೂಕಮ್ಮನ ಮಗಳ ಹೆಸರು ಸುಶೀಲಮ್ಮ. ಸುಶೀಲಮ್ಮ ನ ಮದುವೆ ನಮ್ಮ ಚಿಕ್ಕಪ್ಪ ಗಾರೆಮನೆ ಮಹಾಂತಣ್ಣನಿಗೆ ಮದುವೆ ಮಾಡಿಕೊಡಲಾಗಿದೆ ಎಂದರೆ ಸರಿ. ಸುಶೀಲಮ್ಮ ಮದುವೆಯಾದ 10 ತಿಂಗಳಿಗೆ ತೀರಿಕೊಂಡಿರುತ್ತಾರೆ.  ನಂತರ ಮಾಹಂತಮ್ಮನನ್ನು ಗಾರೆಮನೆ ಮಹಾಂತಣ್ಣನಿಗೆ ಮದುವೆ ಮಾಡಿಕೊಡಲಾಯಿತು ಎಂದರೆ ಸರಿ. ಸದರಿ ಮಹಾಂತಮ್ಮ 1 ನೇ ವಾದಿ  ಎಂದರೆ ಸರಿ. 1 ನೇ ವಾದಿಯವರ ಮಕ್ಕಳು 2  ರಿಂದ 4 ನೇ ವಾದಿ ಹಾಗೂ 2 ಮತ್ತು 3 ನೇ ಪ್ರತಿವಾದಿ ಎಂದರೆ ಸರಿ. ನಾನು ಗಾರಮನೆ  ಭೀಮಣ್ಣ ನ  ಮಗ ಎಂದರೆ ಸರಿ.

**ಪಾಟೀ ಸವಾಲು :-** ಎದುರುದಾರರ ಪರ ವಕೀಲರು ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಪಾಟೀ ಸವಾಲಿಗಾಗಿ ಪ್ರಕರಣವನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ. ಇದೆ.

2 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತುಜೆ ಎಂ ಎಫ್ ಸಿ , ಚಿತ್ರದುರ್ಗ